ಶ್ರೀ ಎ. ಶಂಕರ ಆಳ್ವ.—ನದ್ಯಕ್ಕೆ ಸಂಬಂಧಪಟ್ಟವರೆಲ್ಲರ ಮೇಲೂ ಆರ್ಬಿಟ್ರೇಷನ್ ಕೇಸನ್ನು ಹಾಕಿದೆ. ಆದಷ್ಟು ಬೇಗ ತೀರ್ಮಾನವಾಗಬೇಕೆಂದು ತಿಳಿಸಿದೆ.

MADAM SPEAKER.—As the Hon'ble Minister is unwell, I will hold-over this Question No. 218.

Floods of Varada River

267. Sri KAGODU THIMMAPPA (Sagar).—

Will the Minister for Public Works and Electricity be pleased to state :—

(*a*) whether it has come to the notice of the Government that thousands of acres of land is being washed out every year due to floods of Varada river ;

(*b*) whether they have taken any steps to prevent the floods ;

(*c*) whether they have taken up a scheme to construct a big dam near Kanale village, in Sagar Taluk in this respect ;

(*d*) the reasons for taking up Survey work in the said area ;

(*e*) whether they have considered to connect Varada river with Sharavathi so as to Prevent floods ?

Sri H. N. NANJE GOWDA (Minister of State for Major Irrigation) [on behelf of SRI H. M. CHANNABASAPPA (Minister for Public Works)].—

(*a*) Yes.

(*b*) In order to prevent the floods, flood control and irrigational schemes are under consideration.

(*c*) Flood control of Varada river near Kanale village and irrigational schemes are under consideration.

(*d*) Survey work is being taken up to control the floods of Varada river and to take up irrigational schemes.

(*e*) It has been considered.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರವಾಹ ನಿಯಂತ್ರಣ ಮತ್ತು ನೀರಾವರಿ ಯೋಜನೆ ಪ್ರವಾಹವನ್ನು ತಡೆಗಟ್ಟಲು ಕೈಗೊಳ್ಳಲು ಉದ್ದೇಶಿಸಿರುವುದು ಪರಿಶೀಲನೆಯಲ್ಲಿದೆ ಎಂದು ಉತ್ತರದಲ್ಲಿದೆ. ಎಷ್ಟು ದಿವಸದಲ್ಲಿ ಪರಿಶೀಲನೆ ಪೂರ್ಣವಾಗಬಹುದು ? ಸರಕಾರ ಎಷ್ಟು ದಿವಸಗಳಲ್ಲಿ ಪೂರ್ಣ ಮಾಡುವುದು ?

ಶ್ರೀ ಎಚ್. ಎನ್. ನಂಜೇಗೌಡ.—ಕರಾರುವಾಕ್ಕಾಗಿ ಅದನ್ನು ಹೇಳುವುದಕ್ಕಾಗುವುದಿಲ್ಲ. ಜಾಗ್ರತೆ ಮುಗಿಸಬೇಕೆಂಬ ಅಭಿಪ್ರಾಯವಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಸಂಬಂಧದಲ್ಲಿ ನೀರಾವರಿಗೆ ಬರುವ ತಾಲ್ಲೂಕು ಯಾವುದು ? ಎಷ್ಟು ಪ್ರದೇಶ ನೀರಾವರಿಯಾಗುವುದು ?

ಶ್ರೀ ಎಚ್. ಎನ್. ನಂಜೇಗೌಡ.—ಒಂದು ದೊಡ್ಡ ಸ್ಟೇಟ್‌ಮೆಂಟ್ ಇದೆ, ಕಳಿಸಿಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಎಷ್ಟು ದಿವಸದಿಂದ ಈ ವಿಚಾರ ಪರಿಶೀಲನೆಯಲ್ಲಿದೆ ? ಜಾಗ್ರತೆ ಬೇಕಾದ ಕಾರ್ಯಕ್ರಮ ತೆಗೆದುಕೊಂಡು ಪ್ರವಾಹದಿಂದ ತೊಂದರೆಯಾಗದಂತೆ ವ್ಯವಸ್ಥೆ ಮಾಡುವರಾ ?

ಶ್ರೀ ಎಚ್. ಎನ್. ನಂಜೇಗೌಡ.—1959 ಮತ್ತು 1961ರಲ್ಲಿ ಜಾಸ್ತಿ ಪ್ರವಾಹ ಬಂತು. 1961 ರಿಂದ ಈ ವಿಚಾರದಲ್ಲಿ ಆಲೋಚನೆ ಮಾಡಲು ಪ್ರಾರಂಭಿಸಿದ್ದೇವೆ. 1961ರಲ್ಲಿ ಇದಕ್ಕಾಗಿ ಒಂದು ಕೋಟಿ 76 ಲಕ್ಷ ರೂಪಾಯಿಗಳ ಅಂದಾಜಾಗಿದೆ. ಈಗ ಫಿಗೇಷನ್ನಿಗೆ ಎಷ್ಟು ಸಾಧ್ಯವಿದೆ ಎಂಬುದನ್ನು ಪರಿಶೀಲಿಸುತ್ತಿದೆ. ಜೊತೆಗೆ ಶರಾವತಿ ನದಿಗೆ ವರದಾ ನದಿಯ ನೀರನ್ನು ಸೇರಿಸುವ ವಿಚಾರವೂ ಕೂಡ ಆಲೋಚನೆಯಲ್ಲಿತ್ತು. ಆದರೆ ಇದು ದುಬಾರಿ ಮೆಟ್ಟದ್ದಾದುದರಿಂದ ಇದನ್ನು ಕೈಬಿಡಲಾಗಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಪ್ರವಾಹ ಬಂದು ಅನೇಕ ಸಾರಿ ತೊಂದರೆಯಾಗಿದೆ. ಅದರಿಂದ ಎಷ್ಟು ನಷ್ಟವಾಗಿದೆ ?

ಶ್ರೀ ಎಚ್. ಎನ್. ನಂಜೇಗೌಡ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಎಫ್. ಎಸ್. ತಾವರೆ.—1961ರಲ್ಲಿ ವರದಾ ನದಿಯು ಮಹಾಪೂರ ಬಂದು 17 ಹಳ್ಳಿಗಳಿಗೆ ತೊಂದರೆಯಾಗಿದೆ. ಇದರಿಂದ ಎಷ್ಟು ಕುಟುಂಬಗಳವರು ಬೀದಿಪಾಲಾಗಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ.—61ರಲ್ಲಿ ಮಹಾಪೂರ ಬಂತು. ಯಾವ ಕುಟುಂಬಗಳವರು ಬೀದಿ ಪಾಲಾಗಿದ್ದಾರೆ ಎಂಬ ವಿವರ ನನ್ನಲ್ಲಿಲ್ಲ. ವಿವರ ಕೊಟ್ಟರೆ ಸರಕಾರ ನೂಕ್ತ ಕ್ರಮ ಕೈಗೊಳ್ಳುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಸಾವಿರಾರು ಜನರು ಪ್ರವಾಹದ ಹಾವಳಿಯಿಂದ ಪ್ರತಿ ವರ್ಷ ತೊಂದರೆಗೊಡಾಗುತ್ತಿರುವುದರಿಂದ ಜಾಗ್ರತೆ ನೂಕ್ತ ಕ್ರಮ ಕೈಗೊಂಡು ಈ ತೊಂದರೆ ತಪ್ಪಿಸುವಿರಾ ?

ಶ್ರೀ ಎಚ್. ಎನ್. ನಂಜೇಗೌಡ.—ಬೇಗ ಪರಿಹಾರ ಮಾಡಬೇಕೆಂಬ ಉದ್ದೇಶ ಸರಕಾರಕ್ಕಿದೆ. ಕೇಂದ್ರ ಸರಕಾರದಿಂದ ಪ್ರವಾಹ ನಿಯಂತ್ರಣ ವಗೈರೆಗೆ ಸಹಾಯ ಬರುವುದು. ಅದನ್ನು ಯಾವ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕೆಂಬುದನ್ನು ಯೋಚಿಸಿ ಕೇಂದ್ರದಿಂದ ಹಣ ಸಹಾಯ ಪಡೆದು ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂಬ ಉದ್ದೇಶವಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ವರದಾ ನದಿ ಮತ್ತು ಮಲೆನಾಡಿನಲ್ಲಿರುವ ಇತರ ಕೆಲವು ನದಿಗಳ ಪ್ರವಾಹ ಪ್ರತಿವರ್ಷ ಬಂದು ತೊಂದರೆಯಾಗುತ್ತಿದೆ. ಇದಕ್ಕೆ ಶಾಶ್ವತವಾದ ಪರಿಹಾರ ದೊರೆಯುವಂತೆ ಒಂದು ಯೋಜನೆ ಮಾಡುವಿರಾ ?

Sri H. N. NANJE GOWDA.—It is a suggestion for Consideration.

K. C. T. Mills Limited, Hubli

290. Sri B. G. BANAKAR (Hirekerur).—

Will the Minister for Co-operation be pleased to state :—

(*a*) whether the Board of Management of the Karnatak Co-operative Textile Mills Ltd., Hubli had closed the Mill and paid the compensation to the employees before the Mill was leased out to Sri G. Mahadevappa ;

(*b*) whether Sri G. Mahadevappa has paid all the lease amount according to the agreement ;

(*c*) if not, whether the Government intends to take back the Mill in view of the breach of condition as stipulated in the agreement and take steps to liquidate the Mill ?